


*ಎಂ.ಎಸ್. ಧರ್ಮೇಂದ್ರ, ಜಿ.ಟಿ.ಆರ್.ಇ. ಕ್ಯಾಂಪಸ್*

*ಮುಖ್ಯಮಂತ್ರಿಗಳಿಗೆ ಚೀಫ್ ಮಿನಿಸ್ಟರ್ ಎನ್ನುವ ರೀತಿ ರೌಡಿಗಳಿಗೆ ಕ್ರೈಂ ಮಿನಿಸ್ಟರ್ ಎನ್ನಬಹುದೆ?*

ಊಹೂಂ! ಅವರು ಕ್ರೈಂ ಮೆಗಾಸ್ಟಾರ್! ನಮ್ಮಲ್ಲಿ ರಾಜ್ಯದಲ್ಲಿ ಥೀಫ್ ಮಿನಿಸ್ಟರ್, ಕೇಂದ್ರದಲ್ಲಿ ಕ್ರೈಂ ಮಿನಿಸ್ಟರ್ ಇರುವುದು ವಾಡಿಕೆ.

*ಬಿ.ಎಸ್. ಮುಳ್ಳೂರ, ಹಲಗತ್ತಿ*

*ಸತ್ಯಕ್ಕೂ ಸುಳ್ಳಿಗೂ ಇರುವ ವ್ಯತ್ಯಾಸವೆಷ್ಟು?*

ಗಾಂಧಿಗೂ ರಾಹುಲ್ ಗಾಂಧಿಗೂ ಇರುವಷ್ಟೇ!

*ಅನೀಲ್ ಕುಮಾರ್, ಬೆಳಗಾಂ*

*ಲೋಕಾಯುಕ್ತ ಹೆಗ್ಡೆಯವರಿಗೆ ಮುಂದಿನ ರಾಷ್ಟ್ರಪತಿಯಾಗುವ ಯೋಗ್ಯತೆ ಇದೆ ಎನ್ನುತ್ತಾರಲ್ಲಾ...?*

ಇಂದಿಗೂ ಸತ್ಯ, ನ್ಯಾಯಗಳನ್ನು ನಂಬುವ ಓಲ್ಡ್ ಮಾಡಲ್ ಆದ್ದರಿಂದ– ಯೋಗ್ಯತೆ ಇದೆ, ಸಾಧ್ಯತೆ ಇಲ್ಲ!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*

*ಹೂವಿನ ಚೆಲುವಿಗೂ, ಹೆಣ್ಣಿನ ಚೆಲುವಿಗೂ ಏನು ವ್ಯತ್ಯಾಸ?*

ಹೂವಿನದು ಬಾಡಿ ಹೋಗುವವರೆಗೆ; ಹೆಣ್ಣಿನದು body ಹೋಗುವವರೆಗೆ!

*ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ*

*ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ ಅಂತಾರಲ್ಲಾ ಸಾರ್, ಅದು ಹೇಗೆ?*

ಅದು ಅವುಗಳ ಅಡ್ರೆಸ್; ಸತ್ಯಕ್ಕೆ? saw villa? ಅರ್ಥಾತ್ ಗರಗಸದಂತಹ ಚೂಪಾದ ಮನೆ, ಸುಳ್ಳಿಗೆ ಸುಖ villa!

*ಪಿ.ಜೆ. ರಾಘವೇಂದ್ರ, ಮೈಸೂರು*

*ಶಾಸಕರು ಅನರ್ಹರಾದರೆ ಅವರನ್ನು ಚುನಾಯಿಸಿದವರು ಅನರ್ಹರಾಗುತ್ತಾರಾ?*

ಮರದ ಡೊಂಕಿಗೆ ಬೇರಲ್ಲದೆ ಬೇರೆಯೇ ಕಾರಣವಿರುತ್ತದೆ; ಇದೂ ಹಾಗೆಯೇ!

*ಗಾಯತ್ರಿ, ರಾಜಾಜಿನಗರ*

*ಮಂಗನಿಂದ ಮಾನವ ಅಂತಾರೆ, ಆದರೂ ಇನ್ನೂ ಕೆಲವು ಮಂಗಗಳು ಉಳಿದಿವೆಯಲ್ಲಾ...?*

ಮಾನವನನ್ನು ಕಂಡ ನಂತರ 'ಛೆ! ಹೀಗಾಗಬಾರದು' ಎಂದು ನಿರ್ಧರಿಸಿದವಂತೆ!

*ನೆ.ಸು. ಆನಂದ್, ಕತ್ತರಗುಪ್ಪ*

*ದಾಸಾನುದಾಸರು ಜನಿಸಿದ ಈ ನಾಡಿನಲ್ಲಿ ದಾಸ್ಯ ವಿಮೋಚನೆ ಎಂದು?*

'ಚಮಚಾ'ಗಳು, 'ಅಮ್ಮಾವ್ರು' ಇರುವವರೆಗೆ ಜಗತ್ತು 'ದಾಸ್ಯಾಸ್ಪದ'ವಾಗಿಯೇ ಇರುತ್ತದೆ!

*ಕೆ. ನಾಗಲಕ್ಷ್ಮಿ, ಬೆಂಗಳೂರು*

*ರಾಜಕೀಯ ಮುತ್ಸದ್ದಿಗಳ ಕಿತ್ತಾಟಕ್ಕೂ, ಬೀದಿ ನಾಯಿಗಳ ಕಿತ್ತಾಟಕ್ಕೂ ಏನು ವ್ಯತ್ಯಾಸ?*

ಬೀದಿ ನಾಯಿಗಳು, ಚೇಲಾಗಳು ಹಾಗೂ ರೌಡಿಗಳ ಬೆಂಬಲವಿಲ್ಲದೆ, ಸ್ವಸಾಮರ್ಥ್ಯದಿಂದ ಕಿತ್ತಾಡುತ್ತವೆ!

*ಸವಿರವಿ, ಬಾಳೆಹೊನ್ನೂರು*

*ಹೊರಗಡೆ ಹೋಗಿ ದುಡಿಯುವವರಿಗೆ ಸಂಬಳ ಕೊಡುತ್ತಾರೆ. ಮನೆಯಲ್ಲಿ ದುಡಿಯುವ ಗೃಹಿಣಿಗೆ?*

ಹಣಕ್ಕಿಂತ ಅಮೂಲ್ಯವಾದ ಪ್ರೀತಿ, ಮಮತೆ, ರಕ್ಷಣೆ, ಗೌರವಗಳನ್ನು ಕೊಡುತ್ತಾರೆ!

*ಎಸ್. ಶ್ರೀಧರ್, ಬೆಂಗಳೂರು*

*ಚಾಕು, ಮಚ್ಚು, ಲಾಂಗಿಗಿಂತ ಹರಿತವಾದುದು ಯಾವುದು?*

ರಾಮ್ ಚುರುಕಾದ ಬರಹ!

*ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.*

*ನೂರು ಮಂದಿ ಕೌರವರಲ್ಲಿ ಕೆಲವರಾದರೂ ಒಳ್ಳೆಯವರಿರಲಿಲ್ಲವೆ? ಅವರೇಕೆ ದುರ್ಯೋಧನನ ದುರಾಚಾರವನ್ನು ವಿರೋಧಿಸಲಿಲ್ಲ?*

ಕರ್ಣ ವಿರೋಧಿಸಿದನಲ್ಲ; ಆದರೆ ಅದು ದುರ್ಯೋಧನನಿಗೆ ಕರ್ಣಕಠೋರವಾಯಿತು.

*ಎಂ.ಎಸ್. ಸೋಮಶೇಖರ್, ಮೈಸೂರು*

*ಸುಂದರಿಯರು ಸಾಮಾನ್ಯವಾಗಿ ದಡ್ಡಿಯರಾಗಿರುವ ಕಾರಣವೇನು?*

ಪುಸ್ತಕಕ್ಕಿಂತಲೂ ಕನ್ನಡಿಯ ಮುಂದೆಯೇ ಹೆಚ್ಚು ಕಾಲ ಕಳೆಯುವುದರಿಂದ!

*ವಿಪಿನ್ ಪಿ. ಶೆಟ್ಟಿ, ಮಂಗಳೂರು*

*ಅತಿ ಧಾರ್ಮಿಕತೆ ಎಂಬ ಮನೋರೋಗ ಕೇವಲ ಹೆಂಗಸರಲ್ಲೇ ಹೆಚ್ಚಾಗಿರುವುದೇಕೆ?*

ಗಂಡಸರಿಗೆ ಹೆಂಗಸರನ್ನು ಆ ಮಟ್ಟಕ್ಕೆ ತಳ್ಳುವ ಮನೆ ಹಾಳುತನ ಮೈಗೂಡಿರುವುದರಿಂದ!

*ಕೆ.ಜಿ. ಶೇಖರಪ್ಪ, ಚಿತ್ರದುರ್ಗ*

*ಸಾರ್ವಜನಿಕರಿಗೆ ಒಳ್ಳೆಯದಾಗುವುದಾದರೆ ಸುಳ್ಳು ಹೇಳುವುದರಲ್ಲಿ ತಪ್ಪಿದೆಯಾ ಸಾರ್?*

ತಪ್ಪೇನಿಲ್ಲ, ಆದರೂ ಸುಳ್ಳು ಹೇಳಿದ ಪಾಪ ನಿಮಗೇಕೆ, ವಕೀಲರನ್ನು ನೇಮಿಸಿಕೊಂಡುಬಿಡಿ!

*ಎಚ್. ಆನಂದ್ ಕುಮಾರ್, ಚಿತ್ರದುರ್ಗ*

*ನಿಮ್ಮ ಕಲ್ಪನೆಯಲ್ಲಿ ದೈವಾಂಶ ಸಂಭೂತ ಎಂದರೆ ಯಾರು?*

sum–ಭೂತವಾಗದೆ ಹಿತಮಿತವಾಗಿ ಬದುಕುವವನು.

## ಬಹುಮಾನಿತ ಪ್ರಶ್ನೆ

*ವಿದ್ಯಾ. ಮ. ಉಳ್ಳಾಗಡ್ಡಿ, ಸಂಡೂರು*

*ನೆಹರು, ಗಾಂಧಿ, ಮುಂತಾದ ದೇಶಪ್ರೇಮಿಗಳೆಲ್ಲಾ ಜೈಲಿನಲ್ಲಿಯೇ ಮಹಾನ್ ಕೃತಿಗಳನ್ನು ರಚಿಸಿದರಲ್ಲಾ, ಏಕೆ?*

ತಾವು ಬಿಡುಗಡೆ ಹೊಂದದಿದ್ದರೂ ಪುಸ್ತಕವಾದರೂ ಬಿಡುಗಡೆ ಹೊಂದಲೆಂದು!

*ಎಂ.ಬಿ. ರಂಗಪ್ಪಶೆಟ್ಟಿ, ಮೋಕ*

*ಮನುಷ್ಯನಿಗೆ ಸಾವು ಎಂಬುವುದು ಇರದಿದ್ದರೆ ಈ ಪ್ರಪಂಚ ಹೇಗಿರುತ್ತಿತ್ತು?*

ಹೌಸ್‌ಫುಲ್!

*ಅಮರಯ್ಯ ಪತ್ರಿಮಠ, ಶೋರಾಪುರ*

*ನಾವು ಸದಾ ಲವಲವಿಕೆಯಿಂದ ಇರಬೇಕೆಂದರೆ ನಿಮ್ಮ ಸಲಹೆ?*

ಕೂಡಲೆ ಗೋಳಿನ ಮೆಗಾ ಸೀರಿಯಲ್ ನೋಡುವುದನ್ನು ನಿಲ್ಲಿಸಿಬಿಡಿ!

*ವಿದ್ಯಾನಾಗ್, ಬೆಂಗಳೂರು*

*ರಾಜಕಾರಣಿಗಳಿಗೆ ಹೂವಿನ ಹಾರದ ಬದಲು ಹಾವಿನ ಹಾರ ಹಾಕಿದರೆ ಹೇಗೆ?*

ಹುಚ್ಚಪ್ಪ! ಹಾವಿಗೆ ಹಾವನ್ನೇ ಹಾರವಾಗಿ ಹಾಕುವುದು ಕ್ರಮವಲ್ಲ!

*ನರಸಿಂಹ ಎಂ. ಪೈ, ಹೊನ್ನಾವರ*

*ಪ್ರಾಣಿ, ಪಕ್ಷಿಗಳಿಂದ ಮಾನವ ಕಲಿಯಬೇಕಾದ ಪಾಠ ಯಾವುದು?*

ಕಾಗೆಯಿಂದ ಸಹಬಾಳ್ವೆ, ನಾಯಿಯಿಂದ ನಿಯತ್ತು....




*ಬಿ.ಎಂ. ಪರಶಿವಮೂರ್ತಿ, ಬೆಂಗಳೂರು*

*ನಾನು ಮದುವೆಯಾಗಬೇಕೆಂದಿದ್ದ ಹುಡುಗಿಯರೆಲ್ಲ ಮದುವೆಯಾಗಿ ಗಂಡನ ಮನೆಗೆ ಹೊರಟುಹೋದರು, ಈಗ ನಾನೇನು ಮಾಡಲಿ?*

ಪ್ಲೇ ಹೋಂ ತೆರೆದು ಅವರ ಮಕ್ಕಳನ್ನು ನೋಡಿಕೊಳ್ಳಿ!